doc-575
T-P-2

Reg No B C 155

30—10—72

In The State First Golden Jubilee Celebrated Paper 'Satyavadi' daily, Mysore 4

ಸತ್ಯವಾದಿ

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು

ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 31–10–1972 ಮಂಗಳವಾರ

ಕಲಾಕ್ಷೇತ್ರ

6 ರಿಂದ 7–30 ಸಂಜೆ ಶ್ರೀಮಾ ಎಂ ಪುಟ್ಟರಾಜು, ಮೈಸೂರು ನಾಗಸ್ವರ
7–30 ಶ್ರೀ ಮಾತಾ ಅಸೋಸಿಯೇರ್ಸ್, ಮೈಸೂರು ನಾಟಕ
" ಸಮಯಕ್ಕೊಂದು ಸುಳ್ಳು "

ಜೀವನರಾಯನಕಟ್ಟೆ

6–30 ರಿಂದ 8 ರಾತ್ರಿ ಶ್ರೀಮತಿ ಲಲಿತ ಚಂದ್ರಮೌಳಿ
ಬೆಂಗಳೂರು–3 ಸಂಗೀತ
8 ರಿಂದ 9–30 ರಾತ್ರಿ ಶ್ರೀ ವಾಣಿ ವಿದ್ಯಾಮಂದಿರ, ಮೈಸೂರು ನೃತ್ಯ

ವುಡ್‌ಲಾಂಡ್ಸ್ 27–10–72 ರಿಂದ ಅಮೋಘ 5ನೇ ವಾರ

ರಾಜೇಂದ್ರ ಕುಮಾರ್ ಆರ್ಸಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10–30 ಕ್ಕೆ ಮೇಯರ್ ಮುತ್ತಣ್ಣ

ಅಪೂರ್ವ 3 ನೇ ವಾರ ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ,
ಸಂಧ್ಯ ರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore

ಸರಕಾರಿ ನೌಕರರ ಸಮ್ಮೇಳನ

ಬಳ್ಳಾರಿ— ಸಮ್ಮೇಳನವನ್ನು ಉದ್ಘಾಟಿಸುತ್ತಾ, ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು, ನೌಕರರು ಸರಕಾರದೊಡನೆ ಸಹಕರಿಸಬೇಕೆಂದು ತಿಳಿಸಿದರು.

○

ಬೆಲೆ ಏರಿಕೆ ವಿರುದ್ಧ

ಗುಲ್ಬರ್ಗ— ಬೆಲೆ ಏರಿಕೆ ಬಗ್ಗೆ ತಮ್ಮ ಪ್ರತಿಭಟನಾ ಸತ್ಯಾಗ್ರಹ ಅಂಗವಾಗಿ ರಿಪಬ್ಲಿಕ್ ಪಾರ್ಟಿಯ 20 ಕಾರ್ಯಕರ್ತರು ಒಬ್ಬ ನಾಯಕನೊಡನೆ, ಟಿಕೇಟು ಪಡೆಯದೆ ಬಲಾತ್ಕಾರವಾಗಿ ಸಾರಿಗೆ ಬಸ್‌ನಲ್ಲಿ ಕುಳಿತಾಗ ಅವರನ್ನು ಪೋಲೀಸರು ದಸ್ತಗಿರಿ ಮಾಡಿದರು.

○

ಭೂತಾಯಿ ಮಾಜಿ ರಾಜರ ಶವಸಂಸ್ಕಾರ

ಕುರ್ಜಿ (ಭೂತಾಯಿ)— ಮಾಜಿ ರಾಜ ಜಿಗ್ಮಿ ಡೋರ್ಜಿ ವಾಗ್ಚೂಕ್‌ರವರು ನಿಧನರಾದ 100 ದಿನಗಳಾದ ಶನಿವಾರ ಅವರ ಶವಸಂಸ್ಕಾರವು, ಕಣ್ಣೀರು ಸುರಿಸುತ್ತಿದ್ದ ಸಹಸ್ರಾರು ಭೂತಾನಿಯವರೆದುರು ನಡೆಯಿತು – 4 ಮಂದಿ ಪ್ರಮುಖ ಲಾಮಾಗಳು ಗಂಧದ ಮರದ ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು – 1200 ವರ್ಷಗಳ ಪುರಾತನವಾದ ಕುರ್ಜಿ ಸನ್ಯಾಸಿ ಮಠದಲ್ಲಿ 800 ಲಾಮಾಗಳು ಭೂತಾನಿನ ಧರ್ಮಗ್ರಂಥಗಳಿಂದ ರಾತ್ರಿಯೆಲ್ಲಾ ಸ್ತೋತ್ರ ಪಠಿಸಿದರು

●

ಬಿಟ್ಟೀ ಬೇಡ

ಬೆಂಗಳೂರು— ಹೆಚ್ ಎಂ ಟಿ ಯ ಎರಡನೇ ಗಡಿಯಾರದ ಕಾರ್ಖಾನೆಯನ್ನು ಉದ್ಘಾಟಿಸಿದ ಕೇಂದ್ರ ಯೋಜನಾ ಮಂತ್ರಿ ಶ್ರೀ ಸುಬ್ರಹ್ಮಣ್ಯಂರಿಗೆ ಮತ್ತು ಬಂದಿದ್ದ ಇತರ ಗಣ್ಯರಿಗೆ ಒಂದೊಂದು ಸ್ವಚಲಿತ ಗಡಿಯಾರಗಳನ್ನು ಉಚಿತವಾಗಿ ಕೊಡಲಾಯಿತು ; ಆಗ ಅವರು ಬಿಟ್ಟೀ ಬೇಡ ಅದನ್ನು ಪಡೆದ ಇತರರೂ ಅದರ ಬೆಲೆಯನ್ನು ಕೊಡುವದಾಗಿ ತಿಳಿಸಿದರು ; ಅದರ ಬೆಲೆ ಒಂದೊಂದಕ್ಕೆ ರೂ. 245.

●

Obituary

We regret to publish the sad demise of Dr. Nalini Ranjan Sengupta, Calcutta, on 20 th October. He was a great and good man. He was an eminent and famous doctor. He was the very living force of the Shastra Dharma Pracbar Sabha, a great humanitarian and philanthropist. May his soul rest in peace.

ರಾಜ್ಯಗಳು ತೆರಿಗೆ ಹೆಚ್ಚಿಸಬೇಕು !

ನವದೆಹಲಿ— ಪ್ಲಾನಿಂಗ್ ಕಮಿಷನ್ನು ರಾಜ್ಯ ಸರಕಾರಗಳನ್ನು ತಮ್ಮ ತೆರಿಗೆ ಪ್ರಯತ್ನಗಳನ್ನು ಕೂಡಲೇ ತೀವ್ರಗೊಳಿಸುವಂತೆ ತಿಳಿಸುವ ನಿರೀಕ್ಷೆ ಇದೆ – ಮುಂದಿನ ವರ್ಷ ರೂ. 200 ಕೋಟಿ ತೆರಿಗೆ ಎತ್ತಬೇಕೆನ್ನಲಾಗಿದೆ.

★

ದಸರಾ ಮೆರವಣಿಗೆ

ಬೆಂಗಳೂರು— ವಿಜಯದಶಮಿಯಂದು ಮುನಿರೆಡ್ಡಿ ಪಾಳ್ಯದಲ್ಲಿ ಎರಡು ಕೋಮಿಗಳಲ್ಲಾದ ಘರ್ಷಣೆಯಿಂದ ತ್ಯಜಿಸಲಾಗಿದ್ದ ದಸರಾ ಮೆರವಣಿಗೆಯನ್ನು ವೈಭವವಾಗಿ ನಡೆಸಲಾಯಿತು ; ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರೂ ಭಾಗವಹಿಸಿದ್ದರು – ಶ್ರೀ ಅಜೀಜ್ ಸೇಟ್ ಮಂತ್ರಿಗಳವರು ಕಾರ್ಮಿಕರಲ್ಲಿ ಐಕ್ಯಮತ್ಯ ಮತ್ತು ಸೌಹಾರ್ದ್ಯ ನೆಲೆಸಲು ಎಲ್ಲ ಟ್ರೇಡ್ ಯೂನಿಯನ್ನಿನ ಪ್ರತಿನಿಧಿಗಳ ಸಭೆ ಕರೆದಿರುವರು.

●

ಬೆಲೆ ಏರಿಕೆ

ನವದೆಹಲಿ— ಒಟ್ಟಾರೆ ಬೆಲೆ ಸೂಚಿಯು ಕಳೆದ ವರ್ಷ 3.9 ಇದ್ದದ್ದು ಈಗ 6.5 ಕ್ಕೆ ಏರಿದೆ.

○

ಮತ್ತೊಂದು ಯುದ್ಧ ?

ಜಯಪುರ— ಪಾಕಿಸ್ತಾನದೊಂದಿಗೆ ಮತ್ತೊಂದು ಯುದ್ಧವಾಗಬಹುದೆಂದೂ, ಜನರು ಎಚ್ಚರಿಕೆಯಿಂದಿರಬೇಕೆಂದೂ ಕಾಂಗ್ರೆಸ್ ಅಧ್ಯಕ್ಷ ಡಾ|| ಶರ್ಮಾ ಹೇಳಿದರು.

●

ಭ್ರಷ್ಟಾಚಾರ ನಿರ್ಮೂಲ

ಮದರಾಸು— ತಮ್ಮ ಹೊಸ ಅಣ್ಣಾ ಡಿಎಂಕೆ ಪಾರ್ಟಿಯು ಭ್ರಷ್ಟಾಚಾರ ನಿರ್ಮೂಲಕ್ಕೆ ಶ್ರಮಿಸುವುದೆಂದೂ, ಈ ಕಾರ್ಯ ಸಾಧನೆಯಲ್ಲಿ ಜನರು ಹೃತ್ಪೂರ್ವಕ ಬೆಂಬಲ ನೀಡಬೇಕೆಂದೂ ಎಂ. ಜಿ. ಆರ್. ವಿನಂತಿಸಿರುವರು.

○

ಖಾದಿ ಪ್ರಚಾರಕ್ಕೆ

ಹುಬ್ಬಳ್ಳಿ— ಖಾದಿ ಬಿಟ್ಟು ಬೇರೆ ಬಟ್ಟೆ ಧರಿಸುವದಿಲ್ಲವೆಂಬ ಪ್ರತಿಜ್ಞೆಯನ್ನು ಒಂದು ಲಕ್ಷ ಸಂಸಾರಗಳಿಂದ ಪಡೆಯಲು ಅಖಿಲ ಭಾರತ ಖಾದಿಕಮಿಷನ್ ಯೋಜಿರುವದಾಗಿ ಅದರ ಅಧ್ಯಕ್ಷರು ಹೇಳಿದರು.

○ ನವದೆಹಲಿ— ರಾಜ್ಯಗಳ ವಿದ್ಯುಚ್ಛಕ್ತಿ ಮಂಡಲಿಗಳು ಪದಾರ್ಥಗಳನ್ನು ಕೊಳ್ಳಲು ಬ್ರಿಟನ್ ಭಾರತಕ್ಕೆ ರೂ. 6 ಕೋಟಿ ನೆರವು ನೀಡಿದೆ.

ಗ್ವಾಲಿಯರ್ ರಾಜಮಾತೆಯರ ಪ್ರತಿಜ್ಞೆ

ಜನಸಂಘದ ಸದಸ್ಯತ್ವ ಸ್ವೀಕರಿಸಿದ ಸಂಸತ್ ಸದಸ್ಯೆ ಗ್ವಾಲಿಯರ್ ರಾಜಮಾತೆ ಶ್ರೀಮತಿ ವಿಜಯರಾಜೇ ಸಿಂಧ್ಯರವರು, " ಭಾರತಮಾತೆಯ ಕೋಟಿ ಕೋಟಿ ಉಪೇಕ್ಷಿತ, ಪೀಡಿತ, ದುಃಖಿತ ಜನರ ದುರ್ದೆಸೆಯನ್ನು ದೂರಮಾಡಲು ಸಂಪೂರ್ಣ ಜೀವನವನ್ನು ಸಮರ್ಪಿಸುವೆ " ಎಂದು ಪ್ರತಿಜ್ಞೆ ಮಾಡಿದರು – ಈ ಬಡ ಜನರ ಹೊಟ್ಟೆ ಬರಿದಾಗಿಟ್ಟಿ, ಭುಜಗಳನ್ನು ದುರ್ಬಲವಾಗಿಟ್ಟು ಭಾರತಮಾತೆಯು ಬಲ ಶಾಲಿಯಾಗಲಾರಳು ಇವರ ಜೀವನದಲ್ಲಿ ತಮ್ಮ ಭವಿಷ್ಯದ ಬಗ್ಗೆ ಆಸೆ, ಭರವಸೆಗಳನ್ನು ಮೂಡಿಸಲು, ಇವರಿಗೆ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಭದ್ರತೆಯನ್ನು ದೊರಕಿಸಿಕೊಡಲು ಜೀವನವಿಡೀ ದುಡಿಯುವೆನು, ಎಂದೂ ಹೇಳಿದರು.

ಸೈನ್ಯದಿಂದ ಪರಾರಿ

ಅಮೇರಿಕಾ ಸೈನ್ಯದಿಂದ 1971 ರ ಜೂ 30 ರಲ್ಲಿ ಕಡೆಯಾಗುವ ವರ್ಷದ ಲ್ಲಿ 100000 ಸೈನಿಕರು ವಿಲಿಡರಿ ಕರ್ತವ್ಯವನ್ನು ತ್ಯಜಿಸಿರುವರು.

ಜಡ್ಜರ ಪೆನ್ಷನ್

ನವದೆಹಲಿ— ಜಡ್ಜರು ನಿವೃತ್ತರಾದ ಮೇಲೆ, ಬೇರೆ ಕಡೆ ಕೆಲಸ ಹುಡುಕಿಕೊಂಡು ಹೋಗುವ ಅಥವಾ ವಕೀಲ ವೃತ್ತಿ ಕೈಗೊಳ್ಳುವದನ್ನು ತಪ್ಪಿಸಲು, ಅವರ ಪೆನ್ಷನ್ನು ಸಂಬಳದ ಮೆಟ್ಟಿದಲ್ಲಿರಬೇಕೆಂದು ಭಾರತದ ಮುಖ್ಯ ನ್ಯಾಯಾಧೀಶರಾದ ಶ್ರೀ ಸಿಕ್ರಿಯವರು ಹೇಳಿದರು.

ದಿವ್ಯವಾಣಿ

ಅಧಿಕಾರವನ್ನು ಅಧಿಕಾರವೇ ಹತೋಟಿಯಲ್ಲಿಡಬೇಕು — ಮಾಟೆಸ್ಕಿಯೊ

SHAKTI

SUDHA

A Superb Tonic

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದ ಸಂಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ ರವರ ಚೊಚ್ಚಲು ಚಿತ್ರ

ಅನೆ - ಹುಡುಗ

Quality Printing Neat Binding

Lakshminarasimha Press

Sivarampet, Mysore

Contribute Liberally to the National Defence Fund

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Help The Gorakshana

—HumanitarianPropoganda Monthly ....

Protect the Cow

ಜೋಡುಗಳ ರಫ್ತು ವ್ಯಾಪಾರ

ಪಾಟ್ನಾ— ಜೋಡುಗಳ ರಫ್ತು ವ್ಯಾಪಾರವನ್ನು ಮುಂದಿನ ವರ್ಷದಿಂದ ಸರಕಾರ ವಹಿಸಿಕೊಳ್ಳಲು ಯೋಜಿಸಿರುವದೆಂದು ಕೇಂದ್ರದ ವಿದೇಶೀ ವ್ಯಾಪಾರ ಮಂತ್ರಿ ಶ್ರೀ ಮಿಶ್ರರು ಹೇಳಿದರು.

★ ನವ ದೆಹಲಿಯಿಂದ ಬಂದಿರುವ ವರದಿ ಪ್ರಕಾರ ಲೋಕಸಭೆಯನ್ನು 520 ಸದಸ್ಯರಿಂದ 570 ಸದಸ್ಯರಿಗೆ ಹೆಚ್ಚಿಸುವ ಕುರಿತು ಪ್ರಧಾನರು ವಿರೋಧ ಪಕ್ಷದ ನಾಯಕರೊಂದಿಗೆ 31 ನೇ ತಾ. ಸಮಾಲೋಚಿಸುವರು.

For Mosquito Nets in all sizes Visit Bank Road Bahusar, Mysore